# ಹೊಸತು

## ಕೇಶ ಸಂರಕ್ಷಣೆಗೆ 'ಡವ್' ಶ್ಯಾಂಪು




ಕೇಶ ಸಂರಕ್ಷಣೆಗಾಗಿ 'ಡವ್' ಎರಡು ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದಿದೆ. ಮಹಿಳೆಯರನ್ನು ಸಾಮಾನ್ಯವಾಗಿ ಕಾಡುವ ಕೇಶ ಸಮಸ್ಯೆಗೆ 'ಡವ್' ಶ್ಯಾಂಪು ಮತ್ತು ಕಂಡಿಷನರ್‌ಗಳನ್ನು ಹೊರ ತಂದಿದೆ. 'ನ್ಯೂ ಸ್ಪ್ಲಿಟ್ ಎಂಡ್ ರೆಸ್ಕ್ಯು ಸಿಸ್ಟಂ' ಎಂಬ ಹೆಸರಿನಲ್ಲಿ ಬಂದಿರುವ ಈ ಹೊಸ ಉತ್ಪನ್ನ ಕೂದಲ ಸಮಸ್ಯೆಗೆ ಪರಿಹಾರ ಒದಗಿಸಲಿದೆ ಎನ್ನುತ್ತದೆ ಕಂಪೆನಿ.

ಶ್ಯಾಂಪು ಬೆಲೆ 80 ಮಿಲೀ ಬಾಟಲಿಗೆ ₹ 68, 180 ಮಿ.ಲೀ.ಗೆ ₹ 132, 8 ಮಿ.ಲೀ. ಸ್ಯಾಶೆಗೆ ₹ 3 ಮಾತ್ರ.

ವಿವರಕ್ಕೆ: 98205 20818 ಮತ್ತು 99200 18732



## ಬೇಸಿಗೆಗಾಗಿ ಟ್ರೆಂಡಿ ಸನ್‌ಗ್ಲಾಸ್

ಎನ್‌ವೈಸಿಐಟಿಐ ಅಸೆಸರೀಸ್ ಉತ್ಪನ್ನ ಕಂಪೆನಿಯ ಅಂಗವಾಗಿರುವ 'ಮೆಡಾಮೆ' ಬೇಸಿಗೆಗಾಗಿಯೇ ವಿಶೇಷವಾಗಿ ರೂಪಿಸಲಾದ ಟ್ರೆಂಡಿ ಸನ್ ಗ್ಲಾಸ್‌ಗಳನ್ನು ಮಾರುಕಟ್ಟೆಗೆ ತಂದಿದೆ. ಇದು ಕಣ್ಣಿಗೆ ತಂಪು ನೀಡುತ್ತದೆ, ಫ್ಯಾಷನೆಬಲ್ ಆಗಿಯೂ ಇರುತ್ತದೆ ಎನ್ನುವುದು ಕಂಪೆನಿ ವಿವರಣೆ.

ಕೆಂಪು, ನೀಲಿ ಬಣ್ಣಗಳ ಫ್ರೇಮ್‌ಗಳಲ್ಲಿ ಸಿಗುತ್ತದೆ. ಬೆಲೆ ₹ 699.




## ಜಿಯೋನಿ ಡ್ರೀಮ್ 1 ಸ್ಮಾರ್ಟ್‌ಫೋನ್

ಜಿಯಾನಿ ಕಂಪೆನಿ ಡ್ರೀಮ್ ವನ್ ಹೆಸರಿನ ಸ್ಮಾರ್ಟ್‌ಫೋನ್ ಒಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಈ ಫೋನ್ ಹಲವು ವೈಶಿಷ್ಟ್ಯಗಳನ್ನು ಹೊಂದಿದೆ. ಈ ಆಟೊ ಫೋಕಸ್ ಕ್ಯಾಮೆರಾದಲ್ಲಿ ಒಂದೇ ಕ್ಲಿಕ್‌ಗೆ 99 ಚಿತ್ರಗಳನ್ನು ಸೆರೆ ಹಿಡಿಯಬಹುದು. ಬೆಲೆ ₹ 17999.

ವಿವರಕ್ಕೆ: 9953558197/9873233311

## ಮಹಿಳೆಯರಿಗಾಗಿ ಸುಗಂಧ

ವನೇಸಾ ಎನ್ವಿ ಸುಗಂಧ ಸ್ಪ್ರೇ ಮಹಿಳೆಯರಿಗಾಗಿಯೇ ಬಂದಿದೆ. ಬ್ಲಷ್, ವಿಂಕ್ ಮತ್ತು ಕಿಸ್ ಎಂಬ ಮೂರು ವೈವಿಧ್ಯಗಳಲ್ಲಿ ಲಭ್ಯ. ಜನರ ಜೀವನಶೈಲಿ, ಅಭಿರುಚಿ ಮತ್ತು ಬೇಡಿಕೆಗಳಿಗೆ ತಕ್ಕಂತೆ ಇದನ್ನು ಹೊಸದಾಗಿ ರೂಪಿಸಲಾಗಿದ್ದು, ಮಹಿಳೆಯರಿಗೆ ಇಷ್ಟವಾಗಬಹುದು ಎಂಬುದು ಕಂಪೆನಿಯ ವಿಶ್ವಾಸ. 120 ಗ್ರಾಂ ಪ್ಯಾಕ್ ಬೆಲೆ ₹180. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ.

